ജന്മഭൂമി




ദാസ്താന്റെ ഭാഗമായി സംഘടിപ്പിച്ച വിദ്യാർത്ഥികളുടെ ഫാഷൻ ഷോ മത്സരം

# ആവേശം വാനോളമുയർത്തി അമൃതയിൽ ദാസ്താൻ ഫെസ്റ്റിവലിന് തിരശീല വീണു

ബെംഗളൂരു: എഞ്ചിനീയറിംഗ് മാനേജ്മെന്റ് മേഖലകളിലെ പ്രതിഭകളെ കണ്ടെത്താനായി അമൃത വിശ്വ വിദ്യാപീഠം ബെംഗളൂരു ക്യാമ്പസിൽ ഒരുക്കിയ ദാസ്താൻ ത്രിദിന ഫെസ്റ്റിവലിന " സമാപനമായി. ആദ്യ ദിനം പൂജാ ചടങ്ങുകളോടെ ദാസ്താന് ആഘോഷങ്ങൾക്ക് തുടക്കമായി. സ്വാമി നിഷ്കാമാമൃത ചൈതന്യ പൂജക്ക് നേതൃത്വം നൽകി. പുതു ലോകമെന്ന ആശയത്തെ അടിസ്ഥാനമാക്കി ഒരുക്കിയ ദാസ്താനിന്റെ ഈ വർഷത്തെ പതിപ്പിൽ നിരവധി ശില്പശാലകളും പരിശീലന പരിപാടികളും മത്സരങ്ങളും സംഘടിപ്പിച്ചിരുന്നു. സമൂഹത്തോടുള്ള അനുകമ്പയും ഉത്തരവാദിത്വങ്ങളും നിറവേറ്റുക എന്നത് കൂടിയാണ് വിദ്യാഭ്യാസത്തിന്റെ ലക്ഷ്യമെന്ന അമൃത വിശ്വ വിദ്യാപീഠം ചാൻസലർ മാതാ അമൃതാനന്ദമയി ദേവിയുടെ ദർശനം കൂടി ഉൾക്കൊള്ളുന്നതാണ് ഈ വർഷത്തെ ദാസ്താന്റെ ആശയം. ആദ്യ ദിനത്തിൽ ഹാക്ക് യുവർ ലൈഫ് ഹാക്കത്തോൺ, ചെയിൻ റിയാക്ഷൻ ചലഞ്ച് എന്നിവ പ്രേക്ഷക ശ്രദ്ധ നേടി. ദൈനം ദിന ജീവിതത്തിലെ യഥാർത്ഥ പ്രശ്നങ്ങൾക്ക് സാങ്കേതിക വിദ്യയുടെയും എഐയുടെയും സഹായത്തോടെ ഉത്തരങ്ങൾ വിദ്യാർത്ഥികൾ ഹാക്കത്തോണിൽ കണ്ടെത്തി. ഫെസ്റ്റിവലിന്റെ രണ്ടാം ദിനം വിദ്യാർത്ഥികൾക്ക് ഫോട്ടോഗ്രാഫിയുടെ സാങ്കേതിക മേഖലകളെ പരിചയപ്പെടുത്തിയ പിക്സൽസ് ആൻഡ് പേഴ്സ്പെക്റ്റീവ് ശില്പശാലയിൽ വിദേശ രാജ്യങ്ങളിൽ നിന്നുള്ള വിദഗ്ദർ പങ്കെടുത്തു. റോബോ വാറിനും ദാസ്താൻ രണ്ടാം ദിനം വേദിയായി. സംസ്ഥാനത്തിന്റെ അകത്തും പുറത്തുനിന്നുമായി നിരവധി വിദ്യാർത്ഥികളാണ് ദാസ്താനിൽ പങ്കെടുക്കാൻ അമൃത വിശ്വ വിദ്യാപീഠം ബെംഗളൂരു ക്യാമ്പസിൽ എത്തിയത്. പിന്നണി ഗായകൻ കാർത്തികിന്റെ നേതൃത്വത്തിൽ വിദ്യാർത്ഥികൾക്കായി സംഗീത വിരുന്നും സമാപന ദിനത്തിൽ ഒരുക്കിയിരുന്നു.

മലയാള മനോരമ



ബെംഗളൂരു അമൃത വിശ്വവിദ്യാപീഠം ക്യാംപസിൽ നടത്തിയ ദാസ്താൻ ത്രിദിന ഫെസ്റ്റിവലിൽ നിന്ന്.

# ദാസ്താൻ ഫെസ്റ്റിവലിന് സമാപനം

ബെംഗളൂരു ● എൻജിനീയറിങ് മാനേജ്മെന്റ് മേഖലകളിലെ പ്രതിഭകളെ കണ്ടെത്താൻ ബെംഗളൂരു അമൃത വിശ്വവിദ്യാപീഠം ക്യാംപസിൽ നടത്തിയ ദാസ്താൻ ഫെസ്റ്റിവൽ സമാപിച്ചു. സ്വാമി നിഷ്കാമാമൃത ചൈതന്യ പൂജയ്ക്ക് നേതൃത്വം നൽകി.

ഹാക്ക് യുവർ ലൈഫ് ഹാക്കത്തൺ, ചെയിൻ റിയാക്ഷൻ ചാലഞ്ച് എന്നിവ ശ്രദ്ധ നേടി. ഒട്ടേറെ ശിൽപശാലകളും പരിശീലന പരിപാടികളും മത്സരങ്ങളും നടന്നു. ഫൊട്ടോഗ്രഫിയുടെ സാങ്കേതിക മേഖലകളെ പരിചയപ്പെടുത്തിയ പിക്സൽസ് ആൻഡ് പെഴ്സ്പെക്ടീവ് ശിൽപശാലയിൽ വിദേശ രാജ്യങ്ങളിൽ നിന്നുള്ള വിദഗ്ധർ പങ്കെടുത്തു. പ്രശസ്ത പിന്നണി ഗായകൻ കാർത്തിക്കിന്റെ നേതൃത്വത്തിൽ വിദ്യാർഥികൾക്കു സംഗീത വിരുന്നും ഒരുക്കിയിരുന്നു.

Mathrubhumi
മാതൃഭൂമി

# വാട്സാപ്പിനോട് പറഞ്ഞാൽ മതി, കൃത്യമായി ഓർമ്മിപ്പിച്ചോളും; കണ്ടുപിടിത്തവുമായി വിദ്യാർഥികൾ

**ബെംഗളൂരു▸** സമയബന്ധിതമായി തീർക്കേണ്ട കാര്യങ്ങൾ മറന്ന് പോകുന്നതിന് പരിഹാരം കണ്ടെത്തിയിരിക്കുകയാണ് അമൃത വിശ്വവിദ്യാപീഠം ബെംഗളൂരു കാംപസിലെ രണ്ടാംവർഷ എൻജിനിയറിങ് വിദ്യാർഥികളായ നിതിൻ രമേശ് കുമാർ, മിത്രൻ ഗോകുൽനാഥ്, മധുമിത വിൻസ്‌രാജ് എന്നിവർ. കാംപസിൽ നടക്കുന്ന ദാസ്താൻ ടെക്ക്ഫെസ്റ്റിലെ ഹാക്ക് യുവർ ലൈഫ് ഹാക്കത്തോണിലാണ് ആൽഫ്രഡോ എന്ന് പേരിട്ട എഐ അധിഷ്ഠിത ആപ്ലിക്കേഷൻ വിദ്യാർഥികൾ അവതരിപ്പിച്ചത്.



▶ ആൽഫ്രഡോ ആപ്ലിക്കേഷൻ തയ്യാറാക്കിയ അമൃത വിശ്വവിദ്യാപീഠം ബെംഗളൂരു കാംപസിലെ വിദ്യാർഥികൾ

സമയബന്ധിതമായി പ്രവൃത്തികൾ ചെയ്ത് തീർക്കാൻ ആൽഫ്രഡോ സഹായിക്കും. ആകെ ചെയ്യേണ്ടത് നിശ്ചിത സമയത്ത് ചെയ്തുതീർക്കേണ്ട കാര്യങ്ങൾ വാട്സാപ്പിൽ ഒരു സന്ദേശ രൂപത്തിൽ അയക്കുക മാത്രം. സന്ദേശത്തിന്റെ ഉള്ളടക്കം നിർമിത ബുദ്ധിയുടെ സഹായത്തോടെ പരിശോധിച്ച് നിശ്ചിത പ്രവൃത്തി സംബന്ധിച്ച് ആൽഫ്രഡോ ഓർമ്മപ്പെടുത്തും. ഗൂഗിൾ കലണ്ടർ, അലാറം, ഗൂഗിൾ മീറ്റ് തുടങ്ങിയ വിവിധ സംവിധാനങ്ങളുമായി ആൽഫ്രഡോ ബന്ധപ്പെട്ട് പ്രവർത്തിക്കും.

സന്ദേശത്തിന്റെ അടിസ്ഥാനത്തിൽ ഗൂഗിൾ കലണ്ടറിലും മറ്റ് സംവിധാങ്ങളിലും ആൽഫ്രഡോ അലാറം സെറ്റ് ചെയ്യും. സമയപരിധി ഓർമ്മിപ്പിച്ചുകൊണ്ട് ഉപഭോക്താവിന് സന്ദേശങ്ങളും ലഭിക്കും. കൃത്യ സമയത്ത് ചെയ്ത് തീർക്കേണ്ട കാര്യങ്ങൾ സംബന്ധിച്ച് ഓർമ്മപ്പെടുത്തലുകൾ നൽകാൻ ആൽഫ്രഡോയ്ക്ക് സാധിക്കുമെന്നതിനാൽ കണ്ടുപിടിത്തത്തിന് കൂടുതൽ സാധ്യതകൾ കണ്ടെത്താൻ കഴിയുമെന്ന് ഇതിനു പിന്നിൽ പ്രവർത്തിച്ച വിദ്യാർഥികൾ പറഞ്ഞു.

ನ್ಯಾಯ ಹಾಗೂ ವಸ್ತು ನಿಷ್ಠ ಸುದ್ದಿಗಾಗಿ

ಪ್ರಾದೇಶಿಕ ಸಂಜೆ ದಿನಪತ್ರಿಕೆ

ಸಂಜೆ ಸಮಯ

SANJE SAMAYA

# ಟೆಕ್, ಪ್ರತಿಭೆ ಮತ್ತು ನವೀನತೆಯ ಸಂಯೋಗ: ದಸ್ತಾನ್ 2025 ಅಮೃತ ವಿಶ್ವವಿದ್ಯಾಪೀಠಂ, ಬೆಂಗಳೂರು ಕ್ಯಾಂಪಸ್‌ನ ಗ್ರ್ಯಾಂಡ್ ಟೆಕ್ ಫೆಸ್ಟ್

**ಬೆಂಗಳೂರು:** ತಂತ್ರಜ್ಞಾನ, ಸೃಜನಶೀಲತೆ ಮತ್ತು ಕರುಣೆಯಿಂದ ಪ್ರೇರಿತ ನವೀನತೆಯ ಸಂಭ್ರಮವಾಗಿದ್ದ ಮೂರು ದಿನಗಳ 'ದಸ್ತಾನ್ 2025' ಟೆಕ್ ಫೆಸ್ಟ್, ಅಮೃತ ವಿಶ್ವವಿದ್ಯಾಪೀಠಂ, ಬೆಂಗಳೂರು ಕ್ಯಾಂಪಸ್‌ನಲ್ಲಿ ಯಶಸ್ವಿಯಾಗಿ ಸಂಪನ್ನವಾಯಿತು. ಎಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳ ಯುವ ಪ್ರತಿಭೆಯನ್ನು ಪತ್ತೆಹಚ್ಚಿ ಬೆಳೆಸುವ ಉದ್ದೇಶದಿಂದ ಆಯೋಜಿಸಲಾದ ಈ ಉತ್ಸವವು, ವಿದ್ಯಾರ್ಥಿಗಳಿಗೆ ತಮ್ಮ ತಾಂತ್ರಿಕ ಜ್ಞಾನ ಮತ್ತು ಸಮಸ್ಯೆ ಪರಿಹಾರ ಕೌಶಲ್ಯ ಪ್ರದರ್ಶಿಸಲು ಸಕ್ರಿಯ ವೇದಿಕೆಯಾಯಿತು.

ಉತ್ಸವವು ಸ್ವಾಮಿ ನಿಷ್ಕಾಮಾಮೃತ ಚೈತನ್ಯ ಅವರ ನೇತೃತ್ವದ ಪಾರಂಪರಿಕ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಈ ಮೂಲಕ ಮಾತಾ ಅಮೃತಾನಂದಮಯಿ ದೇವಿ, ಅಮೃತ ವಿಶ್ವವಿದ್ಯಾಪೀಠಂನ ಕುಲಪತಿ, ಅವರ ದೃಷ್ಟಿಯಂತೆ ಶಿಕ್ಷಣವು ಜ್ಞಾನ, ಕರುಣೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು



ಒಟ್ಟುಗೂಡಿಸುವ ಮಾಧ್ಯಮ ಎಂಬ ಸಂದೇಶವನ್ನು ಸಾರಿತು.'ನಿಯೋ ಟೆರಾ ಎ ನ್ಯೂ ವರ್ಲ್ಡ್' ಎಂಬ ಥೀಮ್‌ನಡಿ ನಡೆದ ದಸ್ತಾನ್ 2025, ನವೀನತೆ ಮತ್ತು ನೈಜ ಜಗತ್ತಿನ ಅನ್ವಯತೆಯನ್ನು ಒಟ್ಟುಗೂಡಿಸಿದ ವರ್ಕ್‌ಶಾಪ್‌ಗಳು, ಹ್ಯಾಕಥಾನ್‌ಗಳು ಮತ್ತು ಸ್ಪರ್ಧೆಗಳ ವೈವಿಧ್ಯಮಯ ಸರಣಿಯುಳ್ಳ ಉತ್ಸವವಾಗಿತ್ತು. 'ಹ್ಯಾಕ್ ಯುವರ್ ಲೈಫ್' ಹ್ಯಾಕಥಾನ್ ಮತ್ತು 'ಚೈನ್ ರಿಯಾಕ್ಷನ್ ಚಾಲೆಂಜ್' ವಿದ್ಯಾರ್ಥಿಗಳ ವಿಶಾಲ ಗಮನ ಸೆಳೆದವು. ಇವುಗಳಲ್ಲಿ ವಿದ್ಯಾರ್ಥಿಗಳು ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯನ್ನು (ಎಐ) ಬಳಸಿ ನಿತ್ಯಜೀವನದ ಸಮಸ್ಯೆಗಳಿಗೆ ನವೀನ ಪರಿಹಾರಗಳನ್ನು ಕಂಡುಹಿಡಿದರು.

ಎರಡನೇ ದಿನ ನಡೆದ 'ಪಿಕ್ಸೆಲ್ಸ್ ಅಂಡ್ ಪರ್ಸ್ಪೆಕ್ಟಿವ್ಸ್' ವರ್ಕ್‌ಶಾಪ್‌ನಲ್ಲಿ ಅಂತರರಾಷ್ಟ್ರೀಯ ತಜ್ಞರು ಛಾಯಾಗ್ರಹಣದ ತಾಂತ್ರಿಕ ಮತ್ತು ಕಲಾಪರ ಅಂಶಗಳ ಕುರಿತು ತರಬೇತಿ ನೀಡಿದರು. ಇದರ ಮೂಲಕ ವಿದ್ಯಾರ್ಥಿಗಳಿಗೆ ಕ್ರಿಯೇಟಿವ್ ಟೆಕ್ನಾಲಜಿಗಳ ಜಾಗತಿಕ ಪರಿಚಯ ದೊರಕಿತು. ಜನಪ್ರಿಯ ರೋಬೋ ವಾರ್ಸ್ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಮತ್ತು ಇತರ ರಾಜ್ಯಗಳಿಂದ ಬಂದ ತಂಡಗಳು ತಮ್ಮ ಅತ್ಯಾಧುನಿಕ ರೋಬೋಟಿಕ್ ವಿನ್ಯಾಸ ಹಾಗೂ ನಿಯಂತ್ರಣ ಕೌಶಲ್ಯವನ್ನು ಪ್ರದರ್ಶಿಸಿದವು. ದೇಶದ ವಿವಿಧ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ದಸ್ತಾನ್ 2025ರಲ್ಲಿ ಭಾಗವಹಿಸಿ, ಅಮೃತ ಬೆಂಗಳೂರು ಕ್ಯಾಂಪಸ್‌ನ್ನು ನವೀನತೆ ಮತ್ತು ಸೃಜನಶೀಲತೆಯ ಕೇಂದ್ರವಾಗಿ ರೂಪಿಸಿದರು.

www.societytodaynews.com

സൊസൈറ്റി ടുഡേ

SOCIETY TODAY e-paper



# അമൃതയിൽ ദാസ്താൻ ഫെസ്റ്റിവലിന് തിരശീല വീണു

**ബാംഗ്ലൂർ:** എഞ്ചിനീയറിംഗ് മാനേജ്മെന്റ് മേഖലകളിലെ പ്രതിഭകളെ കണ്ടെത്താനായി അമൃത വിശ്വ വിദ്യാപീഠം ബാംഗ്ലൂർ ക്യാംപസിൽ നടത്തിയ ദാസ്താൻ ത്രിദിന ഫെസ്റ്റിവൽ സമാപിച്ചു. പൂജാ ചടങ്ങുകളോടെ ദാസ്താന് ആഘോഷങ്ങൾക്ക് തുടക്കമായി.

സ്വാമി നിഷ്കാമാമൃത ചൈതന്യ പൂജക്ക് നേതൃത്വം നൽകി. പുതു ലോകമെന്ന ആശയത്തെ അടിസ്ഥാനമാക്കി ഒരുക്കിയ ദാസ്താനിന്റെ ഈ വർഷത്തെ പതിപ്പിൽ നിരവധി ശിൽപ്പശാലകളും പരിശീലന പരിപാടികളും മത്സരങ്ങളും സംഘടിപ്പിച്ചിരുന്നു. ആദ്യ ദിനത്തിൽ ഹാക്ക് യുവർ ലൈഫ് ഹാക്കത്തോൺ, ചെയിൻ റിയാക്ഷൻ ചലഞ്ച് എന്നിവ പ്രേക്ഷക ശ്രദ്ധ നേടി. ദൈനം ദിന ജീവിതത്തിലെ യഥാർത്ഥ പ്രശ്നങ്ങൾക്ക് സാങ്കേതിക വിദ്യയുടെയും എഐയുടെയും സഹായത്തോടെ ഉത്തരങ്ങൾ വിദ്യാർത്ഥികൾ ഹാക്കത്തോണിൽ കണ്ടെത്തി. ഫെസ്റ്റിവലിന്റെ രണ്ടാം ദിനം വിദ്യാർത്ഥികൾക്ക് ഫോട്ടോഗ്രാഫിയുടെ സാങ്കേതിക മേഖലകളെ പരിചയപ്പെടുത്തിയ പിക്സൽസ് ആൻഡ് പേഴ്സ്പെക്ടീവ് ശിൽപ്പശാലയിൽ വിദേശ രാജ്യങ്ങളിൽ നിന്നുള്ള വിദഗ്ദർ പങ്കെടുത്തു. വിദ്യാർത്ഥികളിൽ ആവേശമുയർത്തിയ റോബോ വാറിനും ദാസ്താൻ രണ്ടാം ദിനം വേദിയായി. സംസ്ഥാനത്തിന്റെ അകത്തും പുറത്തുനിന്നുമായി നിരവധി വിദ്യാർത്ഥികളാണ് ദാസ്താനിൽ പങ്കെടുക്കാൻ അമൃത വിശ്വ വിദ്യാപീഠം ബാംഗ്ലൂർ ക്യാമ്പസിൽ എത്തിയത്. പിന്നണി ഗായകൻ കാർത്തികിന്റെ നേതൃത്വത്തിൽ വിദ്യാർത്ഥികൾക്കായി സംഗീത വിരുന്നും സമാപന ദിനത്തിൽ ഒരുക്കിയിരുന്നു.

THE NEW INDIAN EXPRESS
BANGALORE EDITION
15/10/2025



# Students from across India take part in tech fest

ENS @Bengaluru

A three-day technology fest -- Dastaan 2025 -- concluded at Amrita Vishwa Vidyapeetham's Bengaluru campus recently. Students from institutions from across India took part in the fest, showcasing their technical acumen and problem-solving abilities. Built on the theme 'NeoTerra – A New World' hackathons and competitions were held. Of notable significance was 'Robo Wars' that saw robots designed by students battle it out. A workshop 'Pixels and Perspectiveswas the highlight of the day.

THE NEW INDIAN EXPRESS
BANGALORE EDITION
16/10/2025

# Amrita Vidyapeetham's Dastaan tech fest concludes



Bengaluru: The three-day Dastaan-2025 Tech Fest at Amrita Vishwa Vidyapeetham, Bengaluru campus, concluded on a high note, celebrating technology, creativity, and compassion-driven innovation. The event served as a platform for students to showcase their technical acumen and problem-solving abilities. The fest opened with traditional prayers led by Swami Nishkamamrita Chaitanya, setting a spiritual tone in line with the vision of Mata Amritanandamayi Devi, Chancellor of Amrita Vishwa Vidyapeetham. Held on the theme 'NeoTerra – A New World,' it featured a lineup of workshops, hackathons, and competitions. Events like 'Hack Your Life' Hackathon and the 'Chain Reaction Challenge' drew eyeballs. The second day featured 'Pixels and Perspectives', a workshop on the technical and artistic aspects of photography, led by international experts. The crowd-favourite Robo Wars brought together teams from across the state and beyond, showcasing cutting-edge robotics design and control skills. Students from various institutions across India participated in the event, which culminated with a musical evening led by singer Karthik. **ENS**

UDAYAKALA ಉದಯಕಾಲ

# ಅಮೃತ ವಿಶ್ವವಿದ್ಯಾಪೀಠಂನ ದಸ್ತಾನ್ ಉತ್ಸವಕ್ಕೆ ವೈಭವದ ತೆರೆ



**ಉದಯಕಾಲ ನ್ಯೂಸ್, ಬೆಂಗಳೂರು:** ತಂತ್ರಜ್ಞಾನ, ಸೃಜನಶೀಲತೆಯ ಸಮ್ಮಿಳಿತವಾಗಿದ್ದ ಮೂರು ದಿನಗಳ 'ದಸ್ತಾನ್ 2025' ಟೆಕ್ ಫೆಸ್ಟ್ ಯಶಸ್ವಿಯಾಗಿ ಸಂಪನ್ನಗೊಂಡಿತು.


ಅಮೃತ ವಿಶ್ವವಿದ್ಯಾಪೀಠಂನ ಬೆಂಗಳೂರು ಕ್ಯಾಂಪಸ್‌ನಲ್ಲಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳ ಪ್ರತಿಭೆ ಪತ್ತೆಹಚ್ಚಿ ಬೆಳೆಸುವ ಉದ್ದೇಶದಿಂದ ಆಯೋಜಿಸಲಾದ ಈ ಉತ್ಸವವು, ವಿದ್ಯಾರ್ಥಿಗಳಿಗೆ ತಮ್ಮ ತಾಂತ್ರಿಕ ಜ್ಞಾನ ಮತ್ತು ಸಮಸ್ಯೆ ಪರಿಹಾರ ಕೌಶಲ್ಯ ಪ್ರದರ್ಶಿಸಲು ಉತ್ತಮ ವೇದಿಕೆಯಾಯಿತು.

'ನಿಯೋ ಟೆರಾ- ಎ ನ್ಯೂ ವರ್ಲ್ಡ್' ಎಂಬ ಥೀಮ್ ನಡಿ ನಡೆದ ದಸ್ತಾನ್ 2025, ನಾವೀನ್ಯತೆ ಮತ್ತು ನೈಜ ಜಗತ್ತಿನ ಪರಿಕಲ್ಪನೆಗಳನ್ನು ಒಳಗೊಂಡ ವರ್ಕ್‌ಶಾಪ್‌ಗಳು, ಹ್ಯಾಕಥಾನ್‌ಗಳು ಮತ್ತು ಸ್ಪರ್ಧೆಗಳನ್ನು ಒಳಗೊಂವೈವಿಧ್ಯಮಯ ಉತ್ಸವವಾಗಿ ಗಮನ ಸೆಳೆಯಿತು. 'ಹ್ಯಾಕ್ ಯುವರ್ ಲೈಫ್' ಹ್ಯಾಕಥಾನ್ ಮತ್ತು 'ಚೈನ್ ರಿಯಾಕ್ಷನ್ ಚಾಲೆಂಜ್' ಕಾರ್ಯಕ್ರಮಗಳು ವಿದ್ಯಾರ್ಥಿಗಳ ಗಮನ ಸೆಳೆದವು. ಇವುಗಳಲ್ಲಿ ವಿದ್ಯಾರ್ಥಿಗಳು ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯನ್ನು (ಎಐ) ಬಳಸಿ ನಿತ್ಯಜೀವನದ ಹಲವು ಸಮಸ್ಯೆಗಳಿಗೆ ನವೀನ ಪರಿಹಾರಗಳನ್ನು ಕಂಡುಹಿಡಿದರು.

ಎರಡನೇ ದಿನ ನಡೆದ 'ಪಿಕ್ಸೆಲ್ಸ್ ಅಂಡ್ ಪರ್ಸ್ಪೆಕ್ಟಿವ್ಸ್' ವರ್ಕ್‌ಶಾಪ್‌ನಲ್ಲಿ ಅಂತಾರಾಷ್ಟ್ರೀಯ ತಜ್ಞರು ಛಾಯಾಗ್ರಹಣದ ತಾಂತ್ರಿಕ ಮತ್ತು ಕಲೆಪರ ಅಂಶಗಳ ಕುರಿತು ತರಬೇತಿ ನೀಡಿದರು. ರೋಬೋ ವಾರ್ಸ್ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಮತ್ತು ಇತರ ರಾಜ್ಯಗಳಿಂದ ಬಂದ ತಂಡಗಳು ತಮ್ಮ ಅತ್ಯಾಧುನಿಕ ರೋಬೋಟಿಕ್ ವಿನ್ಯಾಸ ಹಾಗೂ ನಿಯಂತ್ರಣ ಕೌಶಲ್ಯವನ್ನು ಪ್ರದರ್ಶಿಸಿದವು. ಉತ್ಸವದ ಅಂತಿಮ ದಿನ ಪ್ರಸಿದ್ಧ ಹಿನ್ನೆಲೆ ಗಾಯಕ ಕಾರ್ತಿಕ್ ಅವರ ಸಂಗೀತ ಸಂಜೆಯೊಂದಿಗೆ ಸಂಪನ್ನವಾಯಿತು.

VIJAYA
KARNATAKA

# ಅಮೃತ ವಿದ್ಯಾಪೀಠದಲ್ಲಿ 'ದಸ್ತಾನ್ 2025' ಯಶಸ್ವಿ



**ಬೆಂಗಳೂರು:** ತಂತ್ರಜ್ಞಾನ, ಸೃಜನಶೀಲತೆ ಮತ್ತು ನಾವೀನ್ಯತೆಯನ್ನೊಳಗೊಂಡ ಮೂರು ದಿನಗಳ 'ದಸ್ತಾನ್ 2025' ಟೆಕ್ ಫೆಸ್ಟ್, ನಗರದ ಅಮೃತ ವಿಶ್ವವಿದ್ಯಾಪೀಠದಲ್ಲಿ ಯಶಸ್ವಿಯಾಗಿ ನಡೆಯಿತು. ಎಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳ ಪ್ರತಿಭೆಯನ್ನು ಪತ್ತೆಹಚ್ಚಿ ಉತ್ತೇಜಿಸುವ ಉದ್ದೇಶದಿಂದ ಆಯೋಜಿಸಲಾದ ಈ ಉತ್ಸವವು, ವಿದ್ಯಾರ್ಥಿಗಳಿಗೆ ತಮ್ಮ ತಾಂತ್ರಿಕ ಜ್ಞಾನ ಮತ್ತು ಸಮಸ್ಯೆ ಪರಿಹಾರ ಕೌಶಲ ಪ್ರದರ್ಶಿಸಲು ಸಕ್ರಿಯ ವೇದಿಕೆಯಾಗಿ ಮಾರ್ಪಟ್ಟಿತು.


'ಸಿಯೋಟೆರಾ – ಎ ನ್ಯೂ ವರ್ಲ್ಡ್' ಥೀಮ್‌ನಡಿ ನಡೆದ ಫೆಸ್ಟ್‌ನಲ್ಲಿ ವಿವಿಧ ಕಾರ್ಯಾಗಾರಗಳು, ಹ್ಯಾಕಥಾನ್‌ಗಳು ಮತ್ತು ಸ್ಪರ್ಧೆಗಳು ನಡೆದವು. 'ಹ್ಯಾಕ್ ಯುವರ್ ಲೈಫ್' ಹ್ಯಾಕಥಾನ್ ಮತ್ತು 'ಚೈನ್ ರಿಯಾಕ್ಷನ್ ಚಾಲೆಂಜ್' ವಿದ್ಯಾರ್ಥಿಗಳ ಗಮನ ಸೆಳೆದವು. ಇವುಗಳಲ್ಲಿ ವಿದ್ಯಾರ್ಥಿಗಳು ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಬಳಸಿ ನಿತ್ಯಜೀವನದ ಸಮಸ್ಯೆಗಳಿಗೆ ನವೀನ ಪರಿಹಾರಗಳನ್ನು ಕಂಡುಕೊಂಡರು.

ಎರಡನೇ ದಿನ ನಡೆದ 'ಪಿಕ್ಸೆಲ್ಸ್ ಟು ಪರ್ಫೆಕ್ಷನ್' ಕಾರ್ಯಾಗಾರದಲ್ಲಿ ಪರಿಣತರು ಛಾಯಾಗ್ರಹಣದ ತಾಂತ್ರಿಕ ಅಂಶಗಳ ಕುರಿತು ತರಬೇತಿ ನೀಡಿದರು. ರೋಬೋ ರೇಸ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ತಮ್ಮ ರೊಬೊಟಿಕ್ಸ್ ಹಾಗೂ ಎಂಜಿನಿಯರಿಂಗ್ ವಿನ್ಯಾಸ ಹಾಗೂ ಸೃಜನಾತ್ಮಕ ಕೌಶಲವನ್ನು ಪ್ರದರ್ಶಿಸಿದರು.

ದೇಶದ ವಿವಿಧ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ದಸ್ತಾನ್ 2025ರಲ್ಲಿ ಭಾಗವಹಿಸಿದ್ದರು. ಉತ್ಸವದ ಅಂತಿಮ ದಿನ ಹಿನ್ನೆಲೆ ಗಾಯಕ ಕಾರ್ತಿಕ್ ಅವರ ಸಂಗೀತ ಸಂಜೆ ನಡೆಯಿತು.

VIJAYAVANI

# ಅಮೃತ ವಿಶ್ವವಿದ್ಯಾಪೀಠದ ದಸ್ತಾನ್ ಸಂಪನ್ನ



ಅಮೃತ ವಿಶ್ವ ವಿದ್ಯಾಪೀಠದಲ್ಲಿ ಹಮ್ಮಿಕೊಂಡಿದ್ದ ದಸ್ತಾನ್- 2025 ಟೆಕ್ ಫೆಸ್ಟ್‌ನಲ್ಲಿ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

**ಬೆಂಗಳೂರು:** ಅಮೃತ ವಿಶ್ವವಿದ್ಯಾಪೀಠದಲ್ಲಿ ಮೂರು ದಿನಗಳ ದಸ್ತಾನ್- 2025 ಟೆಕ್ ಫೆಸ್ಟ್ ಯಶಸ್ವಿಯಾಗಿ ಸಂಪನ್ನವಾಯಿತು.

ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳ ಪ್ರತಿಭೆ ಪತ್ತೆಹಚ್ಚಿ ಬೆಳೆಸುವ ಉದ್ದೇಶದಿಂದ ಆಯೋಜಿಸಲಾಗಿದ್ದ ಉತ್ಸವವು ವಿದ್ಯಾರ್ಥಿಗಳಿಗೆ ತಮ್ಮ ತಾಂತ್ರಿಕ ಜ್ಞಾನ ಮತ್ತು ಸಮಸ್ಯೆ ಪರಿಹಾರ ಕೌಶಲ ಪ್ರದರ್ಶಿಸಲು ಸಕ್ರಿಯ ವೇದಿಕೆಯಾಯಿತು. ಕುಲಪತಿ ಮಾತಾ ಅಮೃತಾನಂದಮಯಿ ದೇವಿ ಅವರ ದೃಷ್ಟಿಯಂತೆ ಶಿಕ್ಷಣವು ಜ್ಞಾನ, ಕರುಣೆ ಮತ್ತು ಸಾಮಾಜಿಕ ಜವಾಬ್ದಾರಿ ಒಟ್ಟುಗೂಡಿಸುವ ಮಾಧ್ಯಮ ಎಂಬ ಸಂದೇಶ ಸಾರಿತು.

'ನಿಯೋ ಟೆರಾ ಎ ನ್ಯೂ ವರ್ಲ್ಡ್' ಎಂಬ ಥೀಮ್‌ನಡಿ ನಡೆದ ದಸ್ತಾನ್- 2025, ನವೀನತೆ ಮತ್ತು ನೈಜ ಜಗತ್ತಿನ ಅನ್ವಯತೆಯನ್ನು ಒಟ್ಟುಗೂಡಿಸಿದ ವರ್ಕ್‌ಶಾಪ್‌ಗಳು, ಹ್ಯಾಕಥಾನ್‌ಗಳು ಮತ್ತು ಸ್ಪರ್ಧೆಗಳ ವೈವಿಧ್ಯಮಯ ಸರಣಿಯುಳ್ಳ ಉತ್ಸವವಾಗಿತ್ತು.

ಪಿಕ್ಸೆಲ್ಸ್ ಆ್ಯಂಡ್ ಪರ್ಸ್ಪೆಕ್ಟಿವ್ಸ್ ವರ್ಕ್ ಶಾಪ್‌ನಲ್ಲಿ ಅಂತಾರಾಷ್ಟ್ರೀಯ ತಜ್ಞರು ಛಾಯಾಗ್ರಹಣದ ತಾಂತ್ರಿಕ ಮತ್ತು ಕಲೆಪರ ಅಂಶಗಳ ಕುರಿತು ತರಬೇತಿ ನೀಡಿದರು. ಜನಪ್ರಿಯ ರೋಬೋ ವಾರ್ಸ್ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಮತ್ತು ಇತರ ರಾಜ್ಯಗಳಿಂದ ಬಂದ ತಂಡಗಳು ತಮ್ಮ ಅತ್ಯಾಧುನಿಕ ರೋಬೋಟಿಕ್ ವಿನ್ಯಾಸ ಹಾಗೂ ನಿಯಂತ್ರಣ ಕೌಶಲವನ್ನು ಪ್ರದರ್ಶಿಸಿದವು. ದೇಶದ ವಿವಿಧ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ಭಾಗವಹಿಸಿ ಅಮೃತ ಬೆಂಗಳೂರು ಕ್ಯಾಂಪಸ್ ಅನ್ನು ನವೀನತೆ ಮತ್ತು ಸೃಜನಶೀಲತೆಯ ಕೇಂದ್ರವಾಗಿ ರೂಪಿಸಿದರು. ಹಿನ್ನೆಲೆ ಗಾಯಕ ಕಾರ್ತಿಕ್ ಅವರ ಸಂಗೀತ ಸಂಜೆ ನಡೆಯಿತು.

PRAJAVANI
BANGALORE EDITION
24/10/2025

# ದಾಸ್ತಾನ್ ಟೆಕ್ ಫೆಸ್ಟ್ ಮುಕ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕೋರ್ಸ್ ಅಧ್ಯಯನದ ವಿದ್ಯಾರ್ಥಿಗಳಲ್ಲಿ ತಂತ್ರಜ್ಞಾನ ಮತ್ತು ಸೃಜನಶೀಲತೆಯನ್ನು ಒರೆಗೆ ಹಚ್ಚುವ ಮೂರು ದಿನಗಳ 'ದಾಸ್ತಾನ್-2025 ಟೆಕ್ ಫೆಸ್ಟ್' ಇತ್ತೀಚೆಗೆ ನಡೆಯಿತು.

'ಶಿಕ್ಷಣವು ಜ್ಞಾನ, ಕರುಣೆ ಮತ್ತು ಸಾಮಾಜಿಕ ಜವಾಬ್ದಾರಿ ಒಟ್ಟುಗೂಡಿಸುವ ಮಾಧ್ಯಮ' ಎಂಬ ಸಂದೇಶದೊಂದಿಗೆ ಅಮೃತ ವಿಶ್ವವಿದ್ಯಾಪೀಠಂ ವತಿಯಿಂದ ಬೆಂಗಳೂರು ನಗರದ



ಅಮೃತ ವಿಶ್ವವಿದ್ಯಾಲಯ ವಿದ್ಯಾಪೀಠಂನ ಬೆಂಗಳೂರು ಕ್ಯಾಂಪಸ್‌ನಲ್ಲಿ ಇತ್ತೀಚೆಗೆ ಮೂರು ದಿನಗಳ 'ದಾಸ್ತಾನ್–2025 ಟೆಕ್ ಫೆಸ್ಟ್' ಆಚರಿಸಲಾಯಿತು.

ಕ್ಯಾಂಪಸ್‌ನಲ್ಲಿ ನಡೆದ ಈ ಉತ್ಸವದಲ್ಲಿ ದೇಶದ ವಿವಿಧ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಯುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪತ್ತೆಹಚ್ಚಿ ಅವರಿಗೆ ತಮ್ಮ ತಾಂತ್ರಿಕ ಜ್ಞಾನ ಮತ್ತು ಸಮಸ್ಯೆಗಳ ಪರಿಹಾರ ಕಲ್ಪಿಸುವ ಮತ್ತು ಅವರ ಕೌಶಲ ಪ್ರದರ್ಶಿಸಲು ಇದು ಅನುವು ಮಾಡಿಕೊಟ್ಟಿತು.

'ನಿಯೋ ಟೆರ್ರಾ-ಎ ನ್ಯೂ ವರ್ಲ್ಡ್' ಎಂಬ ವಿಷಯ ವಸ್ತುವನ್ನು ಒಳಗೊಂಡ ದಾಸ್ತಾನ್-2025ರಲ್ಲಿ, ಪ್ರಾತ್ಯಕ್ಷಿಕೆ, ಹ್ಯಾಕಥಾನ್‌ಗಳ ವೈವಿಧ್ಯಮಯ ಸರಣಿ ಸ್ಪರ್ಧೆ ನಡೆದವು. 'ಹ್ಯಾಕ್ ಯುವರ್ ಲೈಫ್' ಹ್ಯಾಕಥಾನ್ ಮತ್ತು 'ಚೈನ್ ರಿಯಾಕ್ಷನ್ ಚಾಲೆಂಜ್' ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯನ್ನು (ಎಐ) ಬಳಸಿ ದೈನಂದಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವ ಪ್ರಾತ್ಯಕ್ಷಿಕೆಗಳು ಗಮನ ಸೆಳೆದವು.

'ಪಿಕ್ಸೆಲ್ಸ್ ಅಂಡ್ ಪರ್ಸ್ಪೆಕ್ಟಿವ್ಸ್' ವರ್ಕ್‌ಶಾಪ್‌ನಲ್ಲಿ ಅಂತರರಾಷ್ಟ್ರೀಯ ತಜ್ಞರು ಛಾಯಾಗ್ರಹಣದ ತಾಂತ್ರಿಕ ಮತ್ತು ಕಲೆಯ ಅಂಶಗಳ ಕುರಿತು ತರಬೇತಿ ನೀಡಿದರು. ಜನಪ್ರಿಯ ರೋಬೋ ವಾರ್ಸ್ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಮತ್ತು ಅನ್ಯ ರಾಜ್ಯಗಳಿಂದ ಬಂದ ತಂಡಗಳು ತಮ್ಮ ಅತ್ಯಾಧುನಿಕ ರೋಬೋಟಿಕ್ ವಿನ್ಯಾಸ ಹಾಗೂ ನಿಯಂತ್ರಣ ಕೌಶಲವನ್ನು ಪ್ರದರ್ಶಿಸಿದವು. ಉತ್ಸವದ ನೇತೃತ್ವವನ್ನು ಸ್ವಾಮಿ ನಿಷ್ಕಾಮಾಮೃತ ಚೈತನ್ಯ ವಹಿಸಿದ್ದರು. ಹಿನ್ನೆಲೆ ಗಾಯಕ ಕಾರ್ತಿಕ್ ಅಂತಿಮ ದಿನ ಸಂಗೀತ ಸಂಜೆ ನಡೆಸಿಕೊಟ್ಟರು.